ಬೆಂಕಿ ಹಾಕಿರತಕ್ಕ ವಿಚಾರ ಏನು ಇದೆ, 3ದೇವಸ್ಥಾನಗಳನ್ನು ಸುಟ್ಟು ಹಾಕತಕ್ಕ ವಿಚಾರ ಏನು ಇದೆ, ಕಿತ್ತು ಹಾಕತಕ್ಕಂತಹ ವಿಚಾರ ಏನು ಇದೆ, ಈ ಬಗ್ಗೆ ನಾನೇ ಬೇಕಾದರೆ ಅಧಿವೇಶನದ ನಂತರ ಹೋಗಿಬರುತ್ತೇನೆ.

ಏಕೆಂದರೆ ಅಲ್ಲಿರತಕ್ಕ ಎಲ್ಲ ಪರಿಸ್ಥಿತಿ ನನಗೆ ಗೊತ್ತಿದೆ. ನಾನು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿರತಕ್ಕ ಗುಡಿಸಲು ನಿವಾಸಿಗಳಿಗೆ ಕೆಲವು ಭರವಸೆಯನ್ನು ಮುಖ್ಯಮಂತ್ರಿಗಳ ಪರವಾಗಿ ಕೊಟ್ಟಿದ್ದೇನೆ. ನಾನು ಬರುತ್ತೇನೆ ಎನ್ನತಕ್ಕಂತಹ ಭರವಸೆಯನ್ನು ಕೊಟ್ಟಿದ್ದೇವೆ. ಇವರು ಹೇಳಿರತಕ್ಕ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಯಾವುದೇ ಧಾರ್ಮಿಕ ಮನೋಭಾವನೆಗಳಿಗೆ ಧಕ್ಕೆ ಬರದೆ ಇರುವ ರೀತಿಯಲ್ಲಿ ರಕ್ಷಣೆ ಕೊಡುವಂಥ ಕಲಸವನ್ನು ಮಾಡುತ್ತೇನೆ. ಕೊನೆಯದಾಗಿ, ಕೆಲವು ಸಮಾಜಘಾತಕ ಶಕ್ತಿಗಳು, ಮತ್ತು ಕೆಲವು ಜನ ಈ ಗುಡಿಸಲುಗಳಿಗೆ ಬೆಂಕಿ ಹಾಕತಕ್ಕಂತಹ ಪ್ರಯತ್ನವನ್ನು ಮಾಡುತ್ತಿರತಕ್ಕಂಥದ್ದುನಿಜ.

ಅವತ್ತೂ ಈ ಮಾತನ್ನು ಹೇಳಿದ್ದೇನೆ. ಮಾನ್ಯ ಪೋಲೀಸ್ ಕಮೀಷನರ್ ರವರು ಮತ್ತು ನಮ್ಮ ಸರ್ಕಾರ ಘಟನೆಯಾದ 20 ನಿಮಿಷದ ಒಳಗಡೆ ಅಲ್ಲಿಗೆ ಹೋಗಿದ್ದಾರೆ. ಸ್ವತಃ ಅವರೇ ಕೆಲವರ ಬಾಯಲ್ಲಿ ಸೀಮೆಎಣ್ಣೆ, ಪೆಟ್ರೋಲ್ ಇದ್ದದ್ದು, ಕೈಯಲ್ಲಾ ಪೆಟ್ರೋಲ್ ಆಗಿದ್ದುದು ಅವರೇ ಅಲ್ಲೊಂದು ಗುಡಿಸಲಿಗೆ ಬೆಂಕಿ ಹಾಕಿ ಕೊಂಡಿರತಕ್ಕಂತಹದ್ದು, ಇದನ್ನೆಲ್ಲಾ ಸಹಿತ ನೋಡಿದ್ದಾರೆ. ದಸ್ತಗಿರಿ ಮಾಡಿದ್ದಾರೆ. ಕೆಲವರು ತಲೆತಪ್ಪಿಸಿಕೊಂಡು ಹೋಗಿದ್ದಾರೆ. ಇಂತಹ ಜನಗಳನ್ನು ಗೂಂಡಾ ಆಕ್ಟ್ ಒಳಗಡೆ ಅರೆಸ್ಟ್ ಮಾಡಬೇಕೆಂಬ ಉದ್ದೇಶ ನಮ್ಮ ಪೋಲೀಸ್ ಕಮೀಷನರ್ ರವರಿಗೆ ಇದೆ. ಅವರಿಗೆ ಸಂಪೂರ್ಣವಾದ ಸ್ವಾತಂತ್ರವನ್ನು ಕೊಟ್ಟಿದ್ದೇವೆ. ಅಲ್ಲಿರತಕ್ಕ ಜನಗಳಿಗೆ ರಕ್ಷಣೆ ಕೊಡತಕ್ಕಂತಹದ್ದು, ಅದರ ಜೊತೆಗೆ ಗೂಂಡಾಗಳಿಂದ ಯಾವುದೇ ರೀತಿಯ ಚಟುವಟಿಕೆಗಳು ಅಲ್ಲಿ ಆಗದೇ ಇರುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಶ್ರೀಮತಿ ಪ್ರಮೀಳರವರು ಯಾವುದೋ ಒಂದು ಸಂಘಟನೆಯ ಬಗ್ಗೆ ಹೇಳಿದ್ದಾರೆ. ಬಹಳಷ್ಟು ಸಂಘಟನೆಗಳು ಒಳ್ಳೆಯ ಕೆಲಸವನ್ನು ಮಾಡುತ್ತಿವೆ. ಕೆಲವರು ಸಂಘಟನೆಯ ಹೆಸರಿನಲ್ಲಿ ದುರುಪಯೋಗ ಸಹ ಮಾಡಿಕೊಳ್ಳುತ್ತಿರಬಹುದು. ಅಂತಹವರಿಗೆ ಈ ಸರ್ಕಾರ ಯಾವುದೇ ಪುರಸ್ಕಾರವನ್ನು ಕೊಡುವುದಿಲ್ಲ ಗುಡಿಸಲು ನಿವಾಸಿಗಳು ಯಾರು ಇದ್ದಾರೆ, ಅವರ ರಕ್ಷಣೆ ವಿಚಾರದಲ್ಲಿ ರಾಜಕೀಯವನ್ನು ಬೆರಸದೆ,ನಾವು ಅವರ ರಕ್ಷಣೆಗೆ ಬರುತ್ತೇವೆ ಎನ್ನತಕ್ಕಮಾತನ್ನು ಮತ್ತೊಮ್ಮೆ ತಮ್ಮ ಮೂಲಕ ಹೇಳುತ್ತೇನೆ.

ವಿಧಾನ ಸೌಧದ ಸುತ್ತ ಮತ್ತ ಆಟೋರಿಕ್ಷಾಗಳ ಓಡಾಟಕ್ಕೆ ನಿರ್ಭಂದನೆಯನ್ನು ಹಾಕಬೇಕೆಂದು ಟ್ರಾಫಿಕ್ ಪೋಲೀಸ್‌ನವರು ಸರ್ಕಾರಕ್ಕೆ ಸಲಹೆ ನೀಡಿರುವ ಬಗ್ಗೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾರ್ಚ್ 12ನೇ ತಾರೀಖು ಒಂದು ಸುದ್ದಿ ಇದೆ. ವಿಧಾನ ಸೌಧದ ಸುತ್ತಲೂ 3 ಕಿ.ಮೀ ಆಸುಪಾಸಿನಲ್ಲಿ ಆಟೋರಿಕ್ಷಾಗಳು ಓಡಾಡಬಾರದು ಎನ್ನುವ ಒಂದು ತೀರ್ಮಾನವನ್ನು ತೆಗೆದುಕೊಂಡು ಟ್ರಾಫಿಕ್ ಪೋಲಿಸರು ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿದ್ದಾರೆ. ಆ ವರದಿಯನ್ನು ಸರ್ಕಾರ ಒಪ್ಪಿಕೊಂಡಿದೆ ಎನ್ನತಕ್ಕ ಸುದ್ದಿ ಇದೆ. ಆ ಸುದ್ದಿ ನಿಜ ಆದರೆ ಬೆಂಗಳೂರಿಗೆ ಬರತಕ್ಕ ನಾಗರಿಕರಿಗೆ ತೊಂದರೆಯಾಗುತ್ತದೆ. ಅದು ಆಗಬಾರದು. ಈಗ ಪರಿಸ್ಥಿತಿ ಏನಾಗಿದೆ ಎಂಬುದನ್ನು ಸರ್ಕಾರ ಹೇಳಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗ ಬಂದಿರುವ ವರದಿ ಪ್ರಾಕಾರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ದಿನಾಂಕ:

12-3-95ರಲ್ಲಿ ಬಂದಿರುವ ವರದಿ ಪ್ರಕಾರ ಮಾನ್ಯ ಸದಸ್ಯರು ಹೇಳಿದಂತೆ ಇವತ್ತು ನಗರ ಸಂಚಾರಿ ಪೋಲಿಸರು ತಮ್ಮ ಉನ್ನತ ಮಟ್ಟದ ಒಂದು ಸಭೆಯಲ್ಲಿ ಈ ವರದಿಯನ್ನು ಕೊಟ್ಟಿದ್ದಾರೆ. ವಿಧಾನ ಸೌಧದ ಸುತ್ತಮುತ್ತಲು 3 ಕಿ.ಮೀ. ಆಸುಪಾಸಿನಲ್ಲಿ ಆಟೋರಿಕ್ಷಾಗಳು ಓಡಾಡಿದರೆ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಒಬ್ಬರು ಶಾಸಕರನ್ನು ನೋಡಬೇಕೆಂದು ಹೊರಗಡೆಯಿಂದ ಬರುವಂತಹ ಜನ 3 ಕಿ.ಮೀ. ಸುತ್ತಮುತ್ತ ಶಾಸಕ ಪ್ರತಿನಿಧಿಯನ್ನು ನೋಡುವುದಕ್ಕೆ ಇಂತಹ ಪರಿಸ್ಥಿತಿ ಬರುತ್ತದೆ. ಅದಕ್ಕೋಸ್ಕರ ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಇದರಿಂದ ಸಾಮಾನ್ಯ ಜನರಿಗೆ ಕೆಟ್ಟ ಪರಿಣಾಮವಾಗುತ್ತದೆ. ಎರಡನೆಯದು ತಮಗೆ ಈಗಾಗಲೇ ಗೊತ್ತಿರುವಹಾಗೆ ಆಟೋರಿಕ್ಷಾಗಳ ಮೇಲೆ ಲೈಫ್ ಟ್ಯಾಕ್ಸ್ ಎಂದು 1500-1800 ರೂಪಾಯಿಗಳನ್ನು ಹಾಕುವುದಕ್ಕೆ ಹೊರಟಿದ್ದೀರಿ. ಆದು ಬೇರೆಯಾದರೂ ಸಹ ಇವತ್ತು ವಿದ್ಯಾವಂತ ಯುವಕರು ಜೀವನ ಮಾಡುವುದಕ್ಕೆ ಸಾಲ ಪಡೆದು ಆಟೋರಿಕ್ಷಾ ತೆಗೆದು ಕೊಂಡಿದ್ದಾರೆ. ಇದು ಸಹಜವಾಗಿ ಪ್ರಯಾಣಿಕರ ಮೇಲೆ ಭಾರ ಬೀಳುತ್ತದೆ. ಆಕಸ್ಮಾತ್ ವಿಶೇಷವಾಗಿ ಹಾಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಇದ್ದರೆ ವಿರೋಧಪಕ್ಷದ ಮುಖಂಡರನ್ನು ಕರೆದು ಪೋಲೀಸ್ ಅಧಿಕಾರಿಗಳಿಂದ ನಿಮಗೆ ಏನು ವರದಿಬಂದಿದೆ. ಅದನ್ನು ತಿಳಿಸಿ ಚರ್ಚೆ ಮಾಡೋಣ ಆದ್ದರಿಂದ ದಯಮಾಡಿ ಅದನ್ನು ಕಾರ್ಯರೂಪಕ್ಕೆ ತರಬೇಡಿ. ವಿಧಾನ ಸೌಧದ 3 ಕಿ.ಮೀ. ಓಡಾಡಬಾರದು ಎನ್ನುವ ತೀರ್ಮಾನ ತೆಗೆದುಕೊಂಡಿರುವುದು ಏನಿದೆ ಅದಕ್ಕೆ ಆಟೋರಿಕ್ಷಾ ಇಲ್ಲಿ ಪತ್ರ ಕೊಟ್ಟಿದ್ದಾರೆ. ಅವರು ಸತ್ಯಾಗ್ರಹ ಮಾಡುವುದಕ್ಕೆ ಹೊರಟಿದ್ದಾರೆ. ಆದಕ್ಕೆ ಅವಕಾಶ ಕೊಡದೆ ದಯಮಾಡಿ ಸರ್ಕಾರ ಸ್ಪಷ್ಟವಾದ ನಿಲುವು ತೆಗೆದುಕೊಳ್ಳಬೇಕು. ಸಾರ್ವಜನಿಕ ಸಮಸ್ಯೆ ಆಗಿದೆ. ಆಟೋರಿಕ್ಷಾ ಚಾಲಕರ ಪ್ರಶ್ನೆ ಇಲ್ಲಿ ಅಡಗಿದೆ. ಲೈಫ್ ಟ್ಯಾಕ್ಸ್ ಹಾಕುವ ಬಗ್ಗೆ ಮರು ಪರಿಶೀಲನೆ ಮಾಡಬೇಕೆಂದು ಇದರ ಬಗ್ಗೆ ಯೋಜನೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ಆಟೋರಿಕ್ಷಾಗಳನ್ನು ವಿಧಾನ ಸೌಧದ 3 ಕಿ. ಮಿ. ಒಳಗಡೆ ಪ್ರವೇಶಕ್ಕೆ ಬಿಡುವುದಿಲ್ಲವೆನ್ನುವವರದಿಯಲ್ಲಿ ಎಳ್ಳಷ್ಟು ಸತ್ಯಾಂಶವಿಲ್ಲ. ಯಾರೋ ಈ ಸುದ್ದಿಯನ್ನು ಹಬ್ಬಿಸುತ್ತಾರೆ. ನಾನು ವಿಚಾರಣೆ ಮಾಡುವುದಕ್ಕೆ ಪೋಲೀಸ್ ಅಧಿಕಾರಿಗಳಿಗೆ ಹೇಳಿದ್ದೇನೆ. ಪತ್ರಿಕೆಗಳಲ್ಲಿ 2-3 ಸಾರಿ ವರದಿಯಾಗಿದೆ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಯಾವುದೇ ಕಾರಣದಿಂದಲೂ ಆಟೋರಿಕ್ಷಾಗಳನ್ನು ಈ ರೀತಿ ಬ್ಯಾನ್ ಮಾಡತಕ್ಕ ವಿಚಾರ ಸರ್ಕಾರದಮುಂದೆ ಇಲ್ಲ. ಸುಮಾರು ಒಂದು ತಿಂಗಳ ಹಿಂದೆ ಬೆಂಗಳೂರಿನ ಟ್ರಾಫಿಕ್ ಇಂಪ್ರೂವ್ ಮಾಡುವ ದೃಷ್ಟಿಯಿಂದ ನಾವು ಉನ್ನತ ಅಧಿಕಾರಿಗಳ ಒಂದು ಸಭೆಯನ್ನು ಸ್ವತಹ ನಾನೇ ಕರೆದಿದ್ದೇನೆ. ಬಿಡಬ್ಲ್ಯು ಎಸ್‌ಎಸ್‌ಬಿ, ಬಿಸಿಸಿ, ಬಿಡಿಎ, ಕೆಇಬಿ,ಯ ಎಲ್ಲ ಅಧಿಕಾರಿಗಳ ಸಭೆಯನ್ನು ಕರೆದು ನಾನು ವಿವರವಾಗಿ ಚರ್ಚೆ ಮಾಡಿದ್ದೇನೆ. ಅಲ್ಲೂ ಸಹ ಈ ವಿಚಾರ ಪ್ರಸ್ತಾಪವಾಗಲಿಲ್ಲ. ಆದ್ದರಿಂದ ಈ ಸುದ್ದಿಗೆ ಯಾವುದೇ ತರಹದ ಸತ್ಯಾಂಶ ಇದರಲ್ಲಿ ಇಲ್ಲ. ಈ ರೀತಿಯ ವಿಚಾರ ಸಹ ಸರ್ಕಾರದ ಮುಂದೆ ಇಲ್ಲ. ಆಟೋರಿಕ್ಷಾ ಡ್ರೈವರ್‌ಗಳ ಬಗ್ಗೆ ಸರ್ಕಾರಕ್ಕೆ ಅನುಕಂಪ ಇದೆ. ಅವತ್ತಿನ ಜೀವನ ಅವತ್ತೆ ಮಾಡುತ್ತಾರೆ. ಶಾಸಕರನ್ನು ನೋಡಲು ವಿಧಾನ ಸೌಧಕ್ಕೆ ಬರತಕ್ಕಂಥ ಜನರಿಗೆ ಆಟೋರಿಕ್ಷಾದಿಂದ ಉಪಯೋಗವಾಗುತ್ತಿದೆ. ಯಾವುದೇ ಕಾರಣದಿಂದಲೂ ಸರ್ಕಾರ ಈ ಕೆಲಸವನ್ನು ಮಾಡುವುದಿಲ್ಲ. ಇನ್ನು ಲೈಫ್ ಟ್ಯಾಕ್ಸ್ ಬಗ್ಗೆ ಹೇಳಿದ್ದಾರೆ. ಅದು ಹಣಕಾಸಿನ ಮಂತ್ರಿಗಳು ಹಾಗೂ ಮುಖ್ಯಮುಂತ್ರಿಗಳಿಗೆ ಬರತಕ್ಕ ವಿಚಾರ. ನೇರವಾಗಿ ಅದು ನನಗೆ ಬರುವುದಿಲ್ಲ. ಆದ್ದರಿಂದ ಅವರು ಬಂದಮೇಲೆ ಮಾನ್ಯ ಯಡಿಯೂರಪ್ಪನವರು ಹೇಳಿರತಕ್ಕ ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು

ಹಣಕಾಸಿನ ಮಂತ್ರಿಗಳಿಗೆ ತಿಳಿಸಿ ಒಂದು ಸಮಂಜಸವಾದ ಉತ್ತರವನ್ನು ಸರ್ಕಾರದಿಂದ ಕೊಡಲಿಕ್ಕೆ ಅವರಿಗೆ ತಿಳಿಸುತ್ತೇನೆ.

11.20 ಎ.ಎಂ

ಉ) ಬೆಳಗಾವಿ ನಗರಕ್ಕೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಬರುತ್ತಿರುವುದರ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಮಗೆ ನಾನು ಒಂದು ವಿಷಯವನ್ನು ಹೇಳಿದ್ದೆ.

ಅಧ್ಯಕ್ಷರು : ವಿಷಯಗಳು ಬಹಳ ಇವೆ. ಬೇಕಾದರೆ ನಾಳೆ ಪ್ರಸ್ತಾಪ ಮಾಡಿ. ಇಲ್ಲದಿದ್ದರೆ ಅವರ ಆಕ್ಷೇಪಣೆ ನಿಜವಾಗಿಬಿಡುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇದು ಪತ್ರಿಕೆಯಲ್ಲಿ ಬಂದಿದೆ, ರಾಜ್ಯದ ಜನತೆಗೆ ಸಂಬಂಧಪಟ್ಟಿರುವಂಥಾದ್ದು. ತಾವು ಮನಸ್ಸಿಗೆ ನೋವು ಮಾಡಿಕೊಳ್ಳುವುದಾದರೆ ಈ ವಿಷಯವನ್ನು ಎತ್ತುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಈ ಸಂದರ್ಭದಲ್ಲಿ ಇಲ್ಲಿ ಉಪಮುಖ್ಯಮಂತ್ರಿಗಳು ಇದ್ದಾರೆ. ಬೆಳಗಾವಿ ನಗರಕ್ಕೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಬರುತ್ತಿದ್ದಾರೆ. ಇನ್ನು ಎರಡು ವಾರಗಳಲ್ಲಿ ಅವರು ಬರುತ್ತಿದ್ದಾರೆ. ಇದು ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. ಮಹಾರಾಷ್ಟ್ರದಲ್ಲಿ ಆ ಮುಖ್ಯಮಂತ್ರಿಗಳು ಕುಳಿತುಕೊಂಡು ಬೆಳಗಾವಿಯಲ್ಲಿರತಕ್ಕ ಎಲ್ಲ ಕನ್ನಡಿಗರನ್ನು ಹೊರಗಡೆಗೆ ಕಳಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಇದು ಬೆಳಗಾವಿ ಪ್ರಶ್ನೆ ಇದು, ಇದನ್ನು ಮತ್ತೆ ಪಡೆಯುತ್ತೀವೆಂದು ಪ್ರಚೋದನೆ ಮಾಡಿಕೊಂಡು ಹೋಗುತ್ತಿದ್ದಾರೆ. ಅವರು ಇನ್ನು ಎರಡು ವಾರಗಳಲ್ಲಿ ಬೆಳಗಾವಿಗೆ ಬರುವುದಾದರೆ ಏನು ಪರಿಸ್ಥಿತಿ ಆಗಬಹುದು? ಅವರು ಪ್ರಾಮಾಣಿಕವಾಗಿ ಬಂದು ಹೋಗುವುದಾದರೆ ನಮ್ಮ ಅಭ್ಯಂತರವಿಲ್ಲ. ಅವರು ಇಲ್ಲಿಗೆ ಬರುವ ಉದ್ದೇಶ ಏನಿದೆ ಎಂದರೆ, ಇವತ್ತು ಪ್ರಚೋದನೆ ಮಾಡುವುದಕ್ಕೆಂದು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಅವರನ್ನು ಕರೆಸುತ್ತಿದ್ದಾರೆ; ಮತ್ತು ಅಲ್ಲಿಯ ಮುಖ್ಯಮಂತ್ರಿಗಳು ಬರುತ್ತಿದ್ದಾರೆ.

ಇಲ್ಲಿ ಅವರು ಬಂದು ಪ್ರಚೋದನೆ ಮಾಡಿದತಕ್ಷಣ ನಾಳೆ ನಮ್ಮ ಪರಿಸ್ಥಿತಿ ಏನಾಗಬಹುದು? ಅದಕ್ಕಾಗಿ ನಾನು ತಮಗೆ ಹೇಳುವುದೇನೆಂದರೆ, ಅವರು ಸ್ನೇಹದಿಂದ ಬರುವುದಿದ್ದರೆ ಸರಿ. ಇಲ್ಲದಿದ್ದರೆ ಅವರು ಪ್ರಚೋದನೆ ಮಾಡುವುದಕ್ಕೆಂದು ಬರುತ್ತಾರೆ ಎಂದು ಹೇಳುವುದಾದರೆ ಆಗ ನಾವು ಬೇರೆ ರೀತಿಯಲ್ಲಿ ಹೇಳಬೇಕಾಗುತ್ತದೆ. ಅವರು ಬಾರದ ಹಾಗೆ ನಾವು ತಡೆಹಿಡಿಯಬೇಕಾಗುತ್ತದೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಈ ತರಹ ಪ್ರಚೋದನೆ ಮಾಡತಕ್ಕಂಥ ವಿಚಾರಕ್ಕೆ ಬರುವುದಾದರೆ ಅದರಿಂದ ಅತ್ಯಂತ ಗಂಭೀರ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗುತ್ತದೆ. ಈಗ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಅಲ್ಲಿಗೆ ಹೋಗಿದ್ದಾರೆ. ಅದಕ್ಕಾಗಿ ನಾನೇನು ಹೇಳುತ್ತಿದ್ದೇನೆ ಎಂದರೆ ಒಂದು ಅದನ್ನು ತಡೆಹಿಡಿಯಬೇಕು, ಅವರು ಸೌಜನ್ಯಕ್ಕೆ ಬಂದರೆ ನಮ್ಮದೇನೂ ಅಭ್ಯಂತರ ಇಲ್ಲ. ಒಳ್ಳೆಯ ಉದ್ದೇಶದಿಂದ ಒಬ್ಬ ರಾಜ್ಯದ ಮುಖ್ಯಮಂತ್ರಿಗಳು ಬರುವುದಾದರೆ ಅವರನ್ನು ತಡೆಯತಕ್ಕದ್ದು ನಮ್ಮ ಉದ್ದೇಶ ಅಲ್ಲ. ಆದರೆ ಅವರು ಮಹಾರಾಷ್ಟ್ರ ಏಕೀಕರಣ ಸಮಿತಿಯವರ ಸಭೆಗೆ ಬಂದು ಪ್ರಚೋದನೆ ಮಾಡತಕ್ಕಂಥ ಪರಿಸ್ಥಿತಿಗೆ ಬರುವುದಾದರೆ ಅದು ಖಂಡಿತ ಸರಿಯಾದುದಲ್ಲ. ಆದ್ದರಿಂದ ನಾನು ಇದನ್ನು ಸ್ಪಷ್ಟವಾಗಿ ವಿರೋಧಿಸುತ್ತಿದ್ದೇನೆ. ಮತ್ತು ಈ ಸಭೆಯಲ್ಲಿ ಒಂದು ನಿರ್ಣಯವಾಗಬೇಕು. ಅದೇನೆಂದರೆ ಮುಖ್ಯಮಂತ್ರಿಯವರು ಮತ್ತು ಬಾಳಠಕ್ರೆಯವರು ಏನು ಬೇರೆ ಜನಾಂಗಗವರನ್ನು ಅಲ್ಲಿಂದ ಓಡಿಸುತ್ತೇವೆ ಎಂದು ಹೇಳಿರತಕ್ಕಂಥಾದ್ದು,